ಶ್ರೀಮತಿ ಮನೋರಮಾ ಮಧ್ವರಾಜ್ —ತಮ್ಮ ಕಳಕಳಿಯನ್ನು ಇಲ್ಲಿ ವ್ಯಕ್ತಪಡಿಸಿದ್ದೀರಿ. ಈ ಬಗ್ಗೆ ನಮ್ಮ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

ಮೂಡಿಗೆರೆ ತಾಲ್ಲೂಕಿನ ಆರೋಗ್ಯ ಘಟಕ ಹಾಗೂ ಕೇಂದ್ರಗಳು

೩೨೫. ಶ್ರೀ ಶಂಕರಮೂರ್ತಿ ಮೋಟಮ್ಮ (ಮೂಡಿಗೆರೆ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಇರುವ ಆರೋಗ್ಯ ಘಟಕಗಳ ಹಾಗೂ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು?

(ಆ) ಇವುಗಳ ಪೈಕಿ ಯಾವ ಯಾವ ಆರೋಗ್ಯ ಕೇಂದ್ರಗಳಲ್ಲಿ ಮತ್ತು ಆರೋಗ್ಯ ಘಟಕಗಳಲ್ಲಿ ವೈದ್ಯಾಧಿಕಾರಿಗಳು ಇರುವುದಿಲ್ಲ ಹಾಗೂ ಯಾವಾಗ ಭರ್ತಿ ಮಾಡಲಾಗುವುದು

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು)—

(ಅ) ಮೂಡಿಗೆರೆ ತಾಲ್ಲೂಕಿನಲ್ಲಿ ೫ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ೧೦ ಪ್ರಾಥಮಿಕ ಆರೋಗ್ಯ ಘಟಕಗಳು ಇವೆ.

(ಆ) ಪ್ರಾಥಮಿಕ ಆರೋಗ್ಯ ಕೇಂದ್ರ ಬಾಳೆಹೊಳೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ, ಕಳಸ ಇಲ್ಲಿ ಮಹಿಳಾ ವೈದ್ಯಾಧಿಕಾರಿಗಳ ಹುದ್ದೆಯು ಖಾಲಿ ಇವೆ. ಆದಷ್ಟು ಬೇಗ ಭರ್ತಿ ಮಾಡಲಾಗುವುದು.

ಶ್ರೀಮತಿ ಮೋಟಮ್ಮ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ತಪ್ಪು ಉತ್ತರವನ್ನು ಕೇವಲ ೨ ಆಸ್ಪತ್ರೆಗಳಲ್ಲಿ ಅಂದರೆ ಕಳಸ ಮತ್ತು ಬಾಳೆಹೊಳೆ ಕೇಂದ್ರಗಳಲ್ಲಿ ಮಾತ್ರ ಮಹಿಳಾ ವೈದ್ಯರು ಇಲ್ಲವೆಂದು ಹೇಳಿದ್ದಾರೆ ಈ ಊರುಗಳಿಗೆ ಕಳೆದ ೫-೬ ವರ್ಷಗಳಿಂದ ಯಾವ ಮಹಿಳಾ ವೈದ್ಯರನ್ನು ಪೋಸ್ಟ್ ಮಾಡಿದರೂ ಯಾರೂ ಕೂಡ ಬರುತ್ತಿಲ್ಲ. ಇದರ ಜೊತೆಗೆ ಮೂಡಿಗೆರೆ ಮತ್ತು ಹರೇಬೈಲ್ ಆಸ್ಪತ್ರೆಗಳಲ್ಲಿ ವೈದ್ಯರೇ ಇಲ್ಲ. ನಾನು ಈ ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಆದರೆ ಅವರ ಉತ್ತರದಲ್ಲಿ ಕೇವಲ ೨ ಆಸ್ಪತ್ರೆಗಳಲ್ಲಿ ಮಾತ್ರ ಮಹಿಳಾ ವೈದ್ಯರಿಲ್ಲವೆಂದು ಹೇಳಿದ್ದಾರೆ. ಆದಷ್ಟು ಜಾಗ್ರತೆ ಪೋಸ್ಟಿಂಗ್ಸ್ ಮಾಡುತ್ತೇವೆಂದು ಹೇಳಿದ್ದಾರೆ. ಆದಷ್ಟು ಜಾಗ್ರತೆ. ಆದಷ್ಟು ಶೀಘ್ರವಾಗಿ ಎಂದು ತಾವು ಹೇಳಬಹುದು. ಜನರಿಗೆ ಏನೂ ಗೊತ್ತಾಗುವುದಿಲ್ಲವೆಂದು ತಾವು ತಿಳಿದಿರಬಹುದು ಆದರೆ ಈಗ ಜನರು ಬಹಳ ಬುದ್ಧಿವಂತರಾಗಿದ್ದಾರೆ. ಅವರು ನಮ್ಮನ್ನು ಕೇಳುತ್ತಾರೆ, ಸರ್ಕಾರದವರು ವೈದ್ಯರನ್ನು ಇಲ್ಲಿಗೆ ನೇಮಕ ಮಾಡಿದ್ದಾರೆಂದು ತಾವು ಹೇಳುತ್ತಿದ್ದೀರಿ, ಆದರೆ ಇದುವರೆಗೂ ಏತಕ್ಕೆ ಅವರು ಬರಲಿಲ್ಲ ಎಂದು ಕೇಳುತ್ತಾರೆ. ಆದ್ದರಿಂದ ಆದಷ್ಟು ಬೇಗ, ಆದಷ್ಟು ಶೀಘ್ರ ಎಂಬ ಮಾತನ್ನು ಬಿಟ್ಟು ಈ ಪಿ.ಹೆಚ್.ಯು ಮತ್ತು ಪಿ ಹೆಚ್.ಸಿ. ಗಳಿಗೆ ಎಷ್ಟು ದಿವಸದಲ್ಲಿ ಮಹಿಳಾ ವೈದ್ಯರನ್ನು ಪೋಸ್ಟಿಂಗ್ಸ್ ಮಾಡುತ್ತೀರೆಂಬುದನ್ನು ಖಚಿತವಾಗಿ ತಿಳಿಸಬೇಕು.

ಶ್ರೀಮತಿ ಮನೋರಮಾ ಮಧ್ವರಾಜ್ —ಮಾನ್ಯ ಅಧ್ಯಕ್ಷರೇ ಈಗ ಹೇಳಬೇಕಾದರೆ ಮಹಿಳಾ ವೈದ್ಯಾಧಿಕಾರಿಗಳ ೫೫ ಹುದ್ದೆಗಳು ಖಾಲಿ ಇವೆ ಅವನ್ನೆಲ್ಲಾ ಭರ್ತಿ ಮಾಡಬೇಕಾದರೆ ಮಾನ್ಯ ಆರ್ಥ ಸಚಿವರು ನಾವು ಎಲ್ಲ ಕಡೆಯೂ ವಿಚಾರ ವಿನಿಮಯ ಮಾಡಿದಾಗ, ಎಕಾನಮಿ ಇದ್ದ ಬ್ಯಾನನ್ನು ಹಿಂದೆ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ಆ ದೃಷ್ಟಿಯಿಂದ ಪಿ ಎಸ್. ಕಮಿಷನ್ ಅವರು ನಮಗೆ ಒಂದು ಲಿಸ್ಟನ್ನು ಕಳುಹಿಸಿಕೊಡಬೇಕಾಗುತ್ತದೆ. ಅವರು ಲಿಸ್ಟನ್ನು ಕಳುಹಿಸಿಕೊಟ್ಟ ಮೇಲೆ ಮಹಿಳಾ ವೈದ್ಯಾಧಿಕಾರಿಗಳನ್ನು ಹಾಕಲಿಕ್ಕೆ ಪ್ರಯತ್ನ ಮಾಡುತ್ತೇನೆ. ಆದರೆ ಈಗಿರುವ ಪರಿಸ್ಥಿತಿಯಲ್ಲಿ ವೈದ್ಯಾಧಿಕಾರಿಗಳನ್ನು ಹಾಕುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತೇನೆ.

ಮಂಗನ ಕಾಯಿಲೆಯಿಂದಾದ ಸಾವುಗಳು

೬೧೨. ಶ್ರೀ ಆರ್. ಎಸ್. ನಾಯ್ಕ (ಭಟ್ಕಳ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ೧೯೯೫-೯೬ನೇ ಸಾಲಿನಲ್ಲಿ ಮಂಗನ ಕಾಯಿಲೆಯಿಂದ ಎಷ್ಟು ಜನರು ಮೃತರಾಗಿದ್ದಾರೆ ?

ಅ) ಮಂಗನ ಕಾಯಿಲೆ ತಡೆಗಟ್ಟುವಪಕೋಸ್ಕರ ಲಸಿಕೆ ಉತ್ಪಾದನೆಯನ್ನು ಮಾಡ ಲಾಗಿದೆಯೆ ?

ಇ) ಮಾಡುವುದಕ್ಕೋಸ್ಕರ ಎಲ್ಲೆಲ್ಲಿ ಪ್ರಯತ್ನಿಸಲಾಯಿತು, ಹಾಗೂ ಈತನಕ ರಾಜ್ಯ ಸರ್ಕಾರ ಎಷ್ಟು ಹಣ ಖರ್ಚು ಮಾಡಿದೆ ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ೨೧.

ಆ) ಇಲ್ಲ.

ಇ) ಲಸಿಕೆಯನ್ನು ಕರ್ನಾಟಕ ರಾಜ್ಯದಲ್ಲಿ ತಯಾರಿಸಲು ಶಿವಮೊಗ್ಗದಲ್ಲಿರುವ ವಿ.ಡಿ.ಎಲ್. ಸಂಸ್ಥೆಯಲ್ಲಿ ಪ್ರಯತ್ನಿಸಲಾಗಿದೆ.

ಇದುವರೆವಿಗೆ ೧೯೮೪–೮೫ ಆರ್ಥಿಕ ಸಾಲಿನಿಂದ ೧೯೮೯–೯೦ನೇ ಸಾಲಿನವರೆಗೆ ಒಟ್ಟು ೩೧.೬೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವೆಯವರು ಇಲ್ಲಿಯವರೆಗೆ ೩೧.೬೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೂ ಸಹ ಮಂಗನ ಕಾಯಿಲೆಯ ಲಸಿಕೆಯನ್ನು ತಯಾರು ಮಾಡಲು ವಿಫಲರಾಗಿರುತ್ತಾರೆಂದು ಉತ್ತರ ಕೊಟ್ಟಿದ್ದಾರೆ. ಆದ್ದರಿಂದ ಬಹುಶಃ ಲಸಿಕೆ ಸದ್ಯಕ್ಕೆ ಬರುತ್ತದೆಂದು ಕಂಡುಬಂದಿಲ್ಲ. ಇಂಥ ಸಂದರ್ಭದಲ್ಲಿ ಮಂಗನ ಕಾಯಿಲೆ ಇರುವಂಥ ಭಾಗ ಗಳಿಗೆ ವೈದ್ಯಾಧಿಕಾರಿಗಳನ್ನು ಮತ್ತು ಇನ್ನಿತರ ಸಿಬ್ಬಂದಿಗಳನ್ನು ಕೊಡಬೇಕು ಮತ್ತು ಅಲ್ಲಿಗೆ ಸ್ವಚ್ಛತೆಯ ಆಸ್ಪತ್ರೆಗಳನ್ನು ಮಂಜೂರು ಮಾಡಬೇಕೆಂದು ಸುಮಾರು ೬–೭ ವರ್ಷಗಳಿಂದಲೂ ಕೇಳುತ್ತಲೇ ಬಂದಿದ್ದೇವೆ. ಹೊನ್ನಾವರ ತಾಲ್ಲೂಕಿನಲ್ಲಿ ತೀರ ಎಫೆಕ್ಟೀವ್ ಆಗಿರುವಂಥ ಸ್ಥಳಗಳಿಂದರೆ ಸಂಶಿ, ಆಸ್ಪತ್ರೆ ಆರು ತಿಂಗಳಿನಿಂದ ಅಲ್ಲಿ ವೈದ್ಯಾಧಿಕಾರಿಗಳು ಇಲ್ಲ. ಈ ಸಲವೂ ಅಲ್ಲಿಗೆ ಹಾಕಿಲ್ಲ. ಬಳಪೂರಿನಲ್ಲಿ ವೈದ್ಯಾಧಿಕಾರಿಗಳು ಇಲ್ಲ, ಮತ್ತು ಅವಶ್ಯಕ ಸಿಬ್ಬಂದಿಯೂ ಕೂಡ ಅಲ್ಲಿ ಇಲ್ಲ. ಮಂಕಿ ಎಂದು ಒಂದು ಸ್ಥಳ ಇದೆ ಅಲ್ಲಿ ಒಬ್ಬ ಡಾಕ್ಟರ್ ಇದ್ದರು ಅವರನ್ನು ಈಗಾಗಲೇ ಅವರ ಕೇಳಿಕೆ ಮೇಲೆ ವರ್ಗಾವಣೆ ಯನ್ನು ಮಾಡಿರುತ್ತಾರೋ ಏನೋ ಗೊತ್ತಿಲ್ಲ. ಅವರು ಅಲ್ಲಿಂದ ಹೇಗೆ ತಪ್ಪಿಸಿಕೊಂಡು ಹೋದರೋ ಗೊತ್ತಿಲ್ಲ. ನಾನಂತೂ ಅವರನ್ನು ವರ್ಗ ಮಾಡಿ ಎಂದು ಪತ್ರ ಬರೆದಿಲ್ಲ. ಹೊನ್ನಾವರದಲ್ಲಿ ಸಾಕಷ್ಟು ಮಂಗನ ಕಾಯಿಲೆಗೆ ಒಳಗಾದವರು ಇದ್ದಾರೆ. ಅಲ್ಲಿಯೂ ಸಹ ಲೇಡಿ ಡಾಕ್ಟರು ಇಲ್ಲ. ಮೂಲತಃ ಈ ಪ್ರಶ್ನೆಯನ್ನು ಕೇಳಿದ ಉದ್ದೇಶವೇನೆಂದರೆ ಲಸಿಕೆಯನ್ನು ತಯಾರು ಮಾಡುವುದು ಬಿಡುವುದು ಅದು ವಿಜ್ಞಾನಿಗಳಿಗೆ ಬಿಟ್ಟದ್ದು. ಏಕೆಂದರೆ ಅವರು ಬೇರೆ ಬೇರೆ ಹವ್ಯಾಸಗಳಲ್ಲಿರುತ್ತಾರೆ. ಅವರಿಗೆ ಪುರಸೊತ್ತು ಇಲ್ಲ. ಆದರೆ ಸ್ವಚ್ಛತೆಯ ಆಸ್ಪತ್ರೆ ಬೇಕು, ವೈದ್ಯಾಧಿಕಾರಿಗಳು ಇರಬೇಕೆಂದು ನಮ್ಮ ಉದ್ದೇಶವಾಗಿದೆ. ಆದ್ದರಿಂದ ಈ ನಾಲ್ಕು ಕಡೆಗಳಿಗೂ ಅವಶ್ಯಕವಿರುವ ಸಿಬ್ಬಂದಿಯನ್ನು ಅಲ್ಲಿಗೆ ಪೋಸ್ಟ್ ಮಾಡಬೇಕೆಂದು ಹೇಳುವುದರ ಜೊತೆಗೆ ಮಂಗನ ಕಾಯಿಲೆಗೆ ಅವಶ್ಯಕವಾಗಿ ಬೇಕಾದಂಥ ಲಸಿಕೆಯನ್ನು ತಯಾರು ಮಾಡುವುದಕ್ಕೆ ನಮ್ಮ ವಿಜ್ಞಾನಿಗಳಿಂದ ಆಗುತ್ತದೋ ಇಲ್ಲವೋ ತಿಳಿಸ ಬೇಕೆಂದು ಕೇಳುತ್ತೇನೆ ಮತ್ತೆ ಲಸಿಕೆಯನ್ನು ತಯಾರು ಮಾಡುವಾಗ ವಿಫಲರಾಗಿ ಲಸಿಕೆಯನ್ನು ಸಿದ್ಧಪಡಿಸಿ ಅದನ್ನು ಮನುಷ್ಯರ ಮೇಲೆ ಪ್ರಯೋಗ ಮಾಡುವ ಸಂದರ್ಭ ಬರುವಷ್ಟರಲ್ಲಿ ಯಾರು ಯಾರು ಈ ರೋಗಕ್ಕೆ ತುತ್ತಾಗಿರುತ್ತಾರೆ ಅವರಿಗೆ ಪರಿಹಾರವನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕು. ಇವತ್ತು ಮಾನ್ಯ ಮುಖ್ಯಮಂತ್ರಿಗಳೇ ಸದನದಲ್ಲಿ ಇದ್ದಾರೆ, ಅವರೇ ಇದಕ್ಕೆ ಉತ್ತರ ವನ್ನು ಕೊಟ್ಟರೆ ಬಹಳ ಒಳ್ಳೆಯದೆಂದು ಹೇಳುತ್ತೇನೆ.

MR SPEAKER.—The question is directed to the Minister for Health.

ಶ್ರೀ ಆರ್. ಎಸ್. ನಾಯಕ್.—ಮಾನ್ಯ ಅಧ್ಯಕ್ಷರೇ, ಹಣದ ವಿಚಾರ ಬಂದಾಗ ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿಯೇ ನಿರ್ಣಯ ಮಾಡಬೇಕೆಂದು ಮಾನ್ಯ ಸಚಿವರು ಹೇಳಿದ್ದಾರೆ. ಆದ್ದರಿಂದ ಈಗ ಲಾದರೂ ಪ್ರಯತ್ನ ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ನಮ್ಮ ವಿಜ್ಞಾನಿಗಳು ಲಸಿಕೆಯನ್ನು ತಯಾರು ಮಾಡುವುದರಲ್ಲಿ ವಿಫಲರಾಗಿದ್ದಾರೆಂದು ಹೇಳಿದ್ದು ಸರಿಯಾಗಿಲ್ಲ ಕ್ಕೆ ದೂರವಾದುದು. ನಮ್ಮ ಶಿವಮೊಗ್ಗದಲ್ಲಿ ಈಗಾಗಲೇ ೧೫೫ ಸಾವಿರ ಡೋಸ್ ಲಸಿಕೆಯನ್ನು ತಯಾರು ಮಾಡಿದ್ದಾರೆ ಅದನ್ನು ಮನುಷ್ಯರ ಮೇಲೆ ಪ್ರಯೋಗ ಮಾಡುವುದಕ್ಕೆ ಮೊದಲು ಮಂಗನ ಮೇಲೆ

ಪ್ರಯೋಗ ಮಾಡಬೇಕಾಗುತ್ತದೆ. ಈಗಾಗಲೇ ೬ ಮಂಗಗಳ ಮೇಲೆ ಪ್ರಯೋಗ ಮಾಡಿದ್ದಾರೆ, ಇನ್ನೂ ನಾಲ್ಕರ ಮೇಲೆ ಪ್ರಯೋಗ ಮಾಡಬೇಕಾಗಿದೆ ಎಂದು ಡ್ರಗ್ ಕಂಟ್ರೋಲರ್ ಅವರು ಹೇಳಿದ್ದಾರೆ. ಜನರ ಮೇಲೆ ಪ್ರಯೋಗ ಮಾಡುವುದಕ್ಕೆ ಮೊದಲು ಮಂಗಗಳ ಮೇಲೆ ಪ್ರಯೋಗ ಮಾಡಲು ಮಂಗಗಳನ್ನು ಹಿಡಿಯಲು ಅನುಮತಿ ಕೊಡಬೇಕೆಂದು ಅರಣ್ಯ ಇಲಾಖೆಯವರನ್ನು ಕೇಳಿದ್ದೇವೆ. ಆದರೆ ಬೆಂಗಳೂರಿನಿಂದ ಮಂಗಗಳನ್ನು ಒದಗಿಸುತ್ತೇವೆಂದು ಅಧಿಕಾರಿಗಳು ಹೇಳಿದರೂ ಸಹ ಪೂನದಲ್ಲಿರುವ ವಿಜ್ಞಾನಿಗಳು ಎಲ್ಲಿ ಖಾಯಿಲೆ ಇದೆ ಅಲ್ಲಿ ಮಂಗಗಳನ್ನು ಹಿಡಿದು ಪ್ರಯೋಗ ಮಾಡಬೇಕೆಂದು ಹೇಳಿದ್ದರಿಂದ ಇದು ತಡವಾಯಿತೇ ಹೊರತು ಲಸಿಕೆಯನ್ನು ತಯಾರು ಮಾಡುವುದರಲ್ಲಿ ನಮ್ಮ ವಿಜ್ಞಾನಿಗಳು ಖಂಡಿತವಾಗಿಯೂ ವಿಫಲರಾಗಿಲ್ಲ. ಮಾನ್ಯ ಸದಸ್ಯರು ವೈದ್ಯಾಧಿಕಾರಿಗಳು ಬೇಕೆಂದು ಸುತ್ತಿ ಬಳಸಿ ಪ್ರಶ್ನೆ ಕೇಳಿದ್ದಾರೆ. ಮುಖ್ಯವಾಗಿ ಅವರಿಗೆ ಬೇಕಾಗಿರುವುದು ವೈದ್ಯರುಗಳು. ಲಸಿಕೆ ಬಗ್ಗೆ ಅವರ ತಲೆ ಬಿಸಿ ಇಲ್ಲ. ನಾನು ಕೂಡ ಅವರ ಜಿಲ್ಲೆಯ ಉಸ್ತುವಾರಿ ಸಚಿವರಾಗಿರುವುದರಿಂದ, ಈ ಸಲದ ಪರ್ಯಾವಣೆಯಲ್ಲಿ ಕೆಲವರು ಆ ಸ್ಥಳ ಬೇಕು ಈ ಸ್ಥಳ ಬೇಕೆಂದು ಕೇಳಿಕೊಂಡರು. ಇದರಿಂದ ಇದ್ದ ಜಾಗದಲ್ಲೂ ವೈದ್ಯರು ಇಲ್ಲದಂಥ ಪರಿಸ್ಥಿತಿ ಉಂಟಾಗಿದೆ. ನಮ್ಮ ಹೊಸ ರಿಕ್ರೂಟ್‌ಮೆಂಟ್‌ನಲ್ಲಿ ಖಂಡಿತವಾಗಿ ಆದಷ್ಟು ಜಾಗ್ರತೆ ವೈದ್ಯಾಧಿಕಾರಿಗಳನ್ನು ಅಪಾಯಿಂಟ್ ಮಾಡುತ್ತೇನೆಂದು ಹೇಳುತ್ತೇನೆ.

೧೨-೦೦ ಬಿ. ಎಂ,

ಶ್ರೀ ಆರ್. ಎನ್. ನಾಯಕ್.—ನಾನು ಇಂಥ ಸ್ಥಳಗಳಿಗೇ ವೈದ್ಯಾಧಿಕಾರಿಗಳನ್ನು ಹಾಕಿ ಎಂದು ಒತ್ತಾಯ ಮಾಡಿಲ್ಲ. ಆದರೆ ನಾನು ಹೇಳಿದ ನಾಲ್ಕು ಕಡೆಗಳಿಗೆ ವೈದ್ಯಾಧಿಕಾರಿಗಳನ್ನು ಹಾಕಲೇಬೇಕಾಗುತ್ತದೆ. ಯಾವುದೇ ವೈದ್ಯಾಧಿಕಾರಿಗಳನ್ನು ವರ್ಗ ಮಾಡಿ ಎಂದು ನಾನು ಒತ್ತಾಯ ಮಾಡಿಲ್ಲ, ನಾಲ್ಕು ಕಡೆಗೆ ಕೊಡಿ ಎಲ್ಲಾದು ಮಾತ್ರ ಪತ್ರ ಬರೆದಿದ್ದೆ. ಒತ್ತಡ ತರದ ಶಾಸಕರಿಗೆ ಪ್ರಥಮ ಪ್ರಾಶಸ್ತ್ಯ ಕೊಟ್ಟು ವೈದ್ಯಾಧಿಕಾರಿಗಳನ್ನು ಹಾಕಲೇಬೇಕಾಗುತ್ತದೆ. ಇಲ್ಲದಿದ್ದರೆ ಬಹಳ ಕಷ್ಟ ಆಗುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಲಸಿಕೆಯನ್ನು ಕರ್ನಾಟಕ ರಾಜ್ಯದಲ್ಲಿ ತಯಾರಿಸಲು ಶಿವಮೊಗ್ಗದಲ್ಲಿರುವ ವಿ.ಡಿ.ಎಲ್. ಸಂಸ್ಥೆಯಲ್ಲಿ ಪ್ರಯತ್ನಿಸಲಾಗಿದೆ ಎಂದು ಹೇಳುತ್ತಾರೆ, ಪೂನಾದಲ್ಲಿರುವ ವ್ಯಾಕ್ಸಿನ್ ಇನ್‌ಸ್ಟಿಟ್ಯೂಟಿನಿಂದ ಲಸಿಕೆಗಳನ್ನು ತರಿಸಿ ಪ್ರಯೋಗ ಮಾಡಲಿಕ್ಕೆ ಬೇಕಾಗಿರತಕ್ಕ ಗಿನಿಪಿಗ್ಸ್ ಇಲ್ಲ ಎಂಬುದು ನನ್ನ ಗಮನಕ್ಕೆ ಬಂದಿದೆ. ಇದು ನಿಜವೇ ? ೧೯೫೭ನೇ ಇಸವಿಯಿಂದ ಈ ಕಾಯಿಲೆ ಕರ್ನಾಟಕ ರಾಜ್ಯದಲ್ಲಿ ಇದೆ. ವಿಶೇಷವಾಗಿ ಮಲೆನಾಡು ಪ್ರದೇಶದಲ್ಲಿ ಇದು ಇದೆ. ಹಿಂದಿನ ಸಾರಿ ಈ ಪ್ರಶ್ನೆ ಬಂದಾಗ ಈ ಖಾಯಿಲೆ ಗುಣಪಡಿಸುವುದು ಸಾಧ್ಯವೇ ಹೊರತು ತಡೆಗಟ್ಟುವುದು ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಈ ಕಾರಣಕ್ಕಾಗಿ ನಾಯಕ್ ಅವರು ಹೇಳಿದಹಾಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಈ ಖಾಯಿಲೆ ತಗುಲಿರತಕ್ಕ ಕುಟುಂಬಗಳಿಗೆ ಪರಿಹಾರ ಕೊಡತಕ್ಕ ಬಗ್ಗೆ ಆಲೋಚನೆ ಮಾಡುತ್ತೀರಾ ? ಆಲೋಚನೆ ಏನಾದರೂ ಆಗಿದೆಯೇ ?

ಶ್ರೀಮತಿ ಮನೋರಮ ಮಧ್ವರಾಜ್.— ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಹಣ ಕೊಡುತ್ತೇವೆಂದು ಹೇಳಿದ್ದು ನಿಜ. ಅವರು ಮನವಿಯನ್ನು ಮಾಡಿದರೆ ಆ ನಿಧಿಯಿಂದ ಹಣವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಪುಣೆಯಿಂದ ಲಸಿಕೆ ಉಪಯೋಗಿಸಲು ಗಿನಿಪಿಗ್ಸ್ ಸಿಗುತ್ತಿಲ್ಲ ಎಂದು ಹೇಳಿದರು. ಅದು ನನ್ನ ಗಮನಕ್ಕೆ ಬಂದಿಲ್ಲ. ನಾನು ಅದನ್ನು ವಿಚಾರಿಸಿ ಹೇಳುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಶಿವಮೊಗ್ಗ ಇನ್‌ಸ್ಟಿಟ್ಯೂಟಿನಿಂದ ಇನ್‌ಫರ್ಮೇಷನ್ ಬಂದಿದೆ.

ಶ್ರೀಮತಿ ಮನೋರಮ ಮಧ್ವರಾಜ್.—ಅಧಿಕಾರಿಗಳು ಕೊಟ್ಟ ವರದಿ ಪ್ರಕಾರ ಮಂಗಗಳ ಮೇಲೆ ಪ್ರಯೋಗ ಮಾಡುವುದು ಎಂದಿದೆ.

ಪ್ರಾಥಮಿಕ ಆರೋಗ್ಯ ಘಟಕಗಳನ್ನು ಮೇಲ್ದರ್ಜೆಗೆ ಏರಿಸುವುದು

(೫೭೨) ಶ್ರೀ ಜೆ. ರಾಜುಗೌಡ (ಹನೂರು).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ರಾಜ್ಯದಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸಲಾಗಿದೆ ?